

## ಹೆದರಿದ್ದೆ!

(ತಿಮ್ಮ ತನ್ನ ಗರ್ಲ್‌ಫ್ರೆಂಡ್ ಜೊತೆ ಬಿಎಂಡಬ್ಲ್ಯು ಕಾರಿನಲ್ಲಿ ಹೋಗುತ್ತಿದ್ದ)
ತಿಮ್ಮ: ನಾನು ನಿನ್ನಿಂದ ಒಂದು ವಿಷಯ ಮುಚ್ಚಿಟ್ಟಿದ್ದೀನಿ.
ಗರ್ಲ್‌ಫ್ರೆಂಡ್: (ಗಾಬರಿಯಿಂದ) ಏನದು?
ತಿಮ್ಮ: ನನಗೆ ಈಗಾಗಲೇ ಮದುವೆ ಆಗಿದೆ. ಇಬ್ಬರು ಮಕ್ಕಳೂ ಇದ್ದಾರೆ.
ಗರ್ಲ್‌ಫ್ರೆಂಡ್: ಅಷ್ಟೇನಾ. ಅಯ್ಯೋ ಭಗವಂತ! ನಾನೆಲ್ಲೋ ಈ ಕಾರು ನಿಂದಲ್ಲ ಅಂತ ಹೇಳ್ತಿಯೇನೋ ಅಂದ್ಕೊಂಡಿದ್ದೆ.

## ಸಂದರ್ಶನ

ಸಂದರ್ಶಕ: ನಿಮ್ಮನ್ನು ಏಕೆ ಕೆಲಸಕ್ಕೆ ತೆಗೆದುಕೊಳ್ಳಬೇಕು?
ನೀರಜ್: ಸಮಯ ದುಡ್ಡಿದ್ದಂತೆ. ಹೀಗಾಗಿ ಈ ಸಮಯ ಉಳಿತಾಯ ಹಾಗೂ ಸದ್ಬಳಕೆಗೆ ಎಲ್ಲಿಲ್ಲದ ಪ್ರಾಮುಖ್ಯತೆ ಇದೆ. ಹೀಗಾಗಿ ನೀವು ನನಗೆ ಈಗ ಕೆಲಸ ಕೊಟ್ಟರೆ ಇನ್ನೊಬ್ಬರ ಸಂದರ್ಶನ ನಡೆಸುವ ಅಗತ್ಯವಿರುವುದಿಲ್ಲ. ಇದರಿಂದ ನಿಮಗೆ ಸಮಯ ಅಂದರೆ ಹಣ ಉಳಿತಾಯವಾಗುತ್ತದೆ.

★★★

## ಯಾವ ದೋಷ?

ಗುಂಡ: ಜ್ಯೋತಿಷಿಗಳೇ ನೀವಾದರೂ ನನಗೆ ಸಹಾಯ ಮಾಡಿ.
ಜ್ಯೋತಿಷಿ: ಏನಾಯ್ತು ಗುಂಡ. ಯಾವ ರೀತಿಯ ಸಹಾಯ ಬೇಕಿದೆ?
ಗುಂಡ: ನನ್ನ ಎಲ್ಲ ಗೆಳೆಯರಿಗೆ ಮದುವೆಯಾಗಿದ್ದು, ಅವರ ಮಕ್ಕಳೂ ಮದುವೆ ವಯಸ್ಸಿಗೆ ಬಂದಿದ್ದಾರೆ. ಆದರೆ ನನಗೆ ಮಾತ್ರ ಮದುವೆ ಆಗುತ್ತಿಲ್ಲ; ಜಾತಕದಲ್ಲಿ ದೋಷವೇನಾದರೂ ಇದೆಯಾ ನೋಡಿ ಹೇಳಿ?
ಜ್ಯೋತಿಷಿ: ಅದು ದೋಷ ಅಲ್ಲವೋ ಮುಟ್ಠಾಳ. ನೀನು ಸಂತೋಷದಿಂದ ಬದುಕಬೇಕು ಅಂತ ನಿನ್ನ ಕುಂಡಲಿಯಲ್ಲಿ ಆ ದೇವರೇ ಬರೆದು ಕಳುಹಿಸಿದ್ದಾನೆ!

★★★

## ಬ್ರೇಕ್ ಫೇಲ್

ಟ್ಯಾಕ್ಸಿ ಡ್ರೈವರ್: ಸಾರ್ ಟ್ಯಾಕ್ಸಿಯ ಬ್ರೇಕ್ ಫೇಲ್ಯೂರ್ ಆಗಿದೆ. ಗಾಡಿ ನಿಲ್ಲಿಸೋಕೆ ಆಗುತ್ತಿಲ್ಲ. ಏನ್ ಮಾಡ್ಲಿ?
ಪ್ರಯಾಣಿಕ: ಗಾಡಿ ನಿಲ್ಲಿಸೋಕೆ ಆಗ್ದೆ ಇದ್ರೂ ಪರವಾಗಿಲ್ಲ. ಮೊದಲು ಮೀಟರ್ ನಿಲ್ಸೊ ಮಾರಾಯಾ!

★★★

## ಪೆಟ್ಟಾಗಿದ್ದು

ರಂಗನ ತಲೆಗೆ ಗಾಯವಾಗಿ ರಕ್ತ ಸೋರುತ್ತಿತ್ತು. ಆಸ್ಪತ್ರೆಗೆ ಹೋದ
ನರ್ಸ್: ನಿನ್ನ ಹೆಸರೇನು?
ರಂಗ: ನನ್ನ ಹೆಸರು ರಂಗ.
ನರ್ಸ್: ವಯಸ್ಸು?
ರಂಗ: ಇಪ್ಪತ್ತೈದು.
ನರ್ಸ್: ಮದ್ವೆ ಆಗಿದೆಯಾ?
ರಂಗ: ಅಯ್ಯೋ ಇಲ್ಲ, ಇದು ಕಾರ್ ಅಪಘಾತದಲ್ಲಿ ಪೆಟ್ಟಾಗಿರೋದು.

★★★

## ಹುಚ್ಚಾಸ್ಪತ್ರೆಯಲ್ಲಿ

ಹುಚ್ಚಾಸ್ಪತ್ರೆಯಲ್ಲಿ ರೋಗಿಯೊಬ್ಬ ಬಾವಿಯ ಸುತ್ತಲೂ ಸುತ್ತುತ್ತಾ 27...27...27... ಎನ್ನುತ್ತಿದ್ದ. ಹೊಸದಾಗಿ ಕೆಲಸಕ್ಕೆ ಸೇರಿದ್ದ ವೈದ್ಯರು ಕುತೂಹಲದಿಂದ ಹತ್ತಿರಕ್ಕೆ ಹೋಗಿ ಬಾವಿಯಲ್ಲಿ ಏನಿರಬಹುದೆಂದು ತಿಳಿಯಲು ಇಣುಕಿದರು. ರೋಗಿಯೂ ಅವನನ್ನು ಆ ಬಾವಿಯೊಳಗೆ ತಳ್ಳಿ 28...28...28...28... ಎನ್ನುತ್ತಾ ಸುತ್ತಲಾರಂಭಿಸಿದ!

★★★

## ಇಬ್ಬರು ಹೆಂಗಸರ ಮಾತುಕತೆ

ರಾಧಾ: ನಿಮ್ಮ ಯಜಮಾನರು ಎಲ್ಲಿ ಹೋಗಿದ್ದಾರೆ.
ಮಂಜುಳ: 'ತೀರ್ಥ'ಯಾತ್ರೆಗೆ.
ರಾಧಾ: ಅರೇ ಯಾವಾಗ ಹೋದರು?
ಮಂಜುಳ: ಸಾಯಂಕಾಲ 6 ಗಂಟೆಗೆ.
ರಾಧಾ: ಯಾವಾಗ ಬರ್ತಾರೆ.
ಮಂಜುಳ: ರಾತ್ರಿ 10 ಗಂಟೆಗೆ!

(ಸಂಗ್ರಹ) ವಿ. ಹೇಮಂತಕುಮಾರ್, ಬೆಂಗಳೂರು

ಓಂ ✝ ☪ ಸರ್ವೇಜನಃ ಸುಖಿನೋ ಭವಂತು ಓಂ ✝ ☪
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ
ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ.
9620444460
ಖಾಯಂ ಮನೆ ವಿಳಾಸ: ಶ್ರೀ ಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.